ಕರ್ನಾಟಕ ಸರ್ಕಾರ

## ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ,

## ಹೊಸ ಸಾರ್ವಜನಿಕ ಕಚೇರಿಗಳು, ನೃಪತುಂಗ ರಸ್ತೆ, ಬೆಂಗಳೂರು-560001

ಸಂಖ್ಯೆ: ಸಿ3(7) ಪ್ರಾಶಾಶಿ-ವರ್ಗ-07/2017-18 **ದಿನಾಂಕ:06-01-2018**

**: ತಿದ್ದುಪಡಿ ಜ್ಞಾಪನ :**

ವಿಷಯ:- 2017-18 ನೇ ಸಾಲಿನ ಪ್ರಾಥಮಿಕ ಶಾಲಾ ಶಿಕ್ಷಕರ ವೃಂದದ ವರ್ಗಾವಣೆಗಳನ್ನು ಗಣಕೀಕೃತ ಕೌನ್ಸಿಲಿಂಗ್ ಮೂಲಕ ಮಾಡುವ ಬಗ್ಗೆ:

ಉಲ್ಲೇಖ:- ಈ ಕಛೇರಿಯ ವರ್ಗಾವಣಾ ಜ್ಞಾಪನ ಸಂಖ್ಯೆ: ಸಿ3(7) ಪ್ರಾ.ಶಿ. ವರ್ಗ-01/2017-18 ದಿನಾಂಕ: 29/12/2017

*****

2017-18 ನೇ ಸಾಲಿನ ಪ್ರಾಥಮಿಕ ಶಾಲಾ ಶಿಕ್ಷಕರ ವರ್ಗಾವಣಾ ಪ್ರಕ್ರಿಯೆಗೆ ವೇಳಾಪಟ್ಟಿಯನ್ನೊಳಗೊಂಡಂತೆ ವರ್ಗಾವಣಾ ಮಾರ್ಗಸೂಚಿಯನ್ನು ಪ್ರಕಟಿಸಲಾಗಿದೆ. ಸದರಿ ಮಾರ್ಗಸೂಚಿಯಲ್ಲಿ ಕೆಲವು ಅಂಶಗಳನ್ನು ಸೇರ್ಪಡೆ/ತಿದ್ದುಪಡಿ ಮಾಡಿದೆ ಹಾಗು ವೇಳಾ ಪಟ್ಟಿಯನ್ನು ಪರಿಷ್ಕರಿಸಿದಂತೆ ಲಗತ್ತಿಸಿದೆ. ಅಂತೆಯೇ, ಓದಿಕೊಳ್ಳತಕ್ಕದ್ದು.

| ಕ್ರ ಸಂ | ವರ್ಗಾವಣಾ ಮಾರ್ಗಸೂಚಿಯ ಪುಟ ಸಂಖ್ಯೆ | ವರ್ಗಾವಣಾ ಮಾರ್ಗಸೂಚಿಯಲ್ಲಿ ನಮೂದಾಗಿರುವುದು | ತಿದ್ದುಪಡಿ ಮಾಡಿರುವುದು/ ಸೇರ್ಪಡೆಗೊಳಿಸಿರುವುದು |
|---|---|---|---|
| 1 | ಪುಟ 5 ಪ್ಯಾರಾ 4 | ----- ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ನಿಯಮಗಳು 2007 ರ 15 ನೇ ನಿಯಮದಡಿಯಲ್ಲಿ ಬಿಡುಗಡೆಯಾದ ಶಿಕ್ಷಕರು ಒಟ್ಟು ಮೂರು ವರ್ಷಗಳ ಅವಧಿಯವರೆಗೆ ಯಾವುದೇ ವರ್ಗಾವಣೆಗಳಿಗೆ ಅರ್ಹರಾಗಿರತಕ್ಕದ್ದಲ್ಲ. | <u>ತಿದ್ದುಪಡಿ</u><br>------- ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ನಿಯಮಗಳು 2007 *ಕ್ಕೆ ಸಂಬಂಧಪಟ್ಟಂತೆ. ಈ ಹಿಂದೆ ಚಾಲ್ತಿಯಲ್ಲಿದ್ದ ನಿಯಮಗಳ* 15 ನೇ ನಿಯಮದಡಿಯಲ್ಲಿ, ಬಿಡುಗಡೆಯಾದ ಶಿಕ್ಷಕರು ಒಟ್ಟು ಮೂರು ವರ್ಷಗಳ ಅವಧಿಯವರೆಗೆ ಯಾವುದೇ ವರ್ಗಾವಣೆಗಳಿಗೆ ಅರ್ಹರಾಗಿರತಕ್ಕದ್ದಲ್ಲ. |
| 2 | ಪುಟ 7 ಕ್ರಮಸಂಖ್ಯೆ 10 | ನಿಯಮ 21(3) ರನ್ವಯ-ಮೊದಲನೇ ಹಂತದಲ್ಲಿ ಯಾವುದೇ ತಾಲ್ಲೂಕಿನಲ್ಲಿ ಮಂಜೂರಾದ ವೃಂದ ಬಲದ ಶೇ 20 ಮತ್ತು ಹೆಚ್ಚಿನ ಖಾಲಿ ಹುದ್ದೆಗಳು ಇರುವ ತಾಲ್ಲೂಕುಗಳಿಗೆ ವಿಶೇಷ ವರ್ಗೀಕರಣದ ಹುದ್ದೆಗಳಲ್ಲಿನ ಶಿಕ್ಷಕರ ಪ್ರಕರಣಗಳಲ್ಲಿ ಕಡ್ಡಾಯ ವರ್ಗಾವಣೆ ಕೌನ್ಸಿಲಿಂಗ್ ಹಮ್ಮಿಕೊಳ್ಳುವುದು. | <u>ತಿದ್ದುಪಡಿ</u><br>ನಿಯಮ 21(3) ರನ್ವಯ ಮೊದಲನೇ ಹಂತದಲ್ಲಿ ಯಾವುದೇ ತಾಲ್ಲೂಕಿನಲ್ಲಿ ಮಂಜೂರಾದ ವೃಂದ ಬಲದ ಶೇ 20 ಮತ್ತು ಹೆಚ್ಚಿನ ಖಾಲಿ ಹುದ್ದೆಗಳು ಇರುವ ತಾಲ್ಲೂಕುಗಳಿಗೆ *ನಿರ್ದಿಷ್ಟ ಹುದ್ದೆಗಳಲ್ಲಿನ* ಶಿಕ್ಷಕರ ಪ್ರಕರಣಗಳಲ್ಲಿ ಕಡ್ಡಾಯ ವರ್ಗಾವಣೆ ಕೌನ್ಸಿಲಿಂಗ್ ಹಮ್ಮಿಕೊಳ್ಳುವುದು. |
| 3 | ಪುಟ ಸಂಖ್ಯೆ 10 ಕ್ರಮಸಂಖ್ಯೆ: 22 | 'ಎ' ವಲಯದ ಶಿಕ್ಷಕರನ್ನು 'ಸಿ' ವಲಯಕ್ಕೆ ವರ್ಗಾವಣಾ ಕೌನ್ಸಿಲಿಂಗ್ | <u>ತಿದ್ದುಪಡಿ</u><br>'ಎ' ವಲಯದ ಶಿಕ್ಷಕರನ್ನು 'ಸಿ' ವಲಯಕ್ಕೆ ವರ್ಗಾವಣೆಗಾಗಿ ಕೌನ್ಸಿಲಿಂಗ್ - *ಶೇ 20* |

| | | | |
|---|---|---|---|
| | | | *ಕ್ಕಿಂತಲೂ ಹೆಚ್ಚಿನ ಹುದ್ದೆಗಳು ಖಾಲಿ ಇರುವ ಘಟಕಕ್ಕೆ ಆದ್ಯತೆಯಲ್ಲಿ ವರ್ಗಾವಣೆಗೊಳಿಸುವುದು* |
| 4 | ಪುಟ ಸಂಖ್ಯೆ 11<br>ಕ್ರಮ ಸಂಖ್ಯೆ 3 | ನಿಯಮ 21(4) ರಂತೆ ನಿರ್ದಿಷ್ಟ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಂತಹ ಶಿಕ್ಷಕರು ಈಗಾಗಲೇ 'ಎ' ವಲಯದಲ್ಲಿ ಸತತ 10 ವರ್ಷಗಳ ಗರಿಷ್ಟ ಸೇವಾವಧಿಯನ್ನು ಪೂರೈಸಿದ್ದಲ್ಲಿ ಕೋರಿಕೆ ವರ್ಗಾವಣೆಗಳ ನಂತರ ಅಂತಹ ಶಿಕ್ಷಕರಿಗೆ ಕಡ್ಡಾಯ ವರ್ಗಾವಣೆಯನ್ನು ಹಮ್ಮಿಕೊಂಡು 'ಸಿ' ವಲಯದ ಹುದ್ದೆಗೆ ಕಡ್ಡಾಯವಾಗಿ ವರ್ಗಾವಣೆಗೊಳಿಸತಕ್ಕದ್ದು. | <u>ತಿದ್ದುಪಡಿ</u><br>ನಿಯಮ 21(4) ರಂತೆ ನಿರ್ದಿಷ್ಟ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಂತಹ ಶಿಕ್ಷಕರು ಈಗಾಗಲೇ 'ಎ' ವಲಯದಲ್ಲಿ ಸತತ 10 ವರ್ಷಗಳ ಗರಿಷ್ಟ ಸೇವಾವಧಿಯನ್ನು ಪೂರೈಸಿದ್ದಲ್ಲಿ ಕೋರಿಕೆ ವರ್ಗಾವಣೆಗಳ ನಂತರ ಅಂತಹ ಶಿಕ್ಷಕರಿಗೆ ಕಡ್ಡಾಯ ವರ್ಗಾವಣೆಯನ್ನು ಹಮ್ಮಿಕೊಂಡು 'ಸಿ' ವಲಯದ ಹುದ್ದೆಗೆ ಕಡ್ಡಾಯವಾಗಿ ವರ್ಗಾವಣೆಗೊಳಿಸತಕ್ಕದ್ದು. *ನಿಯಮ **17(1)** ರಂತೆ ಶೇ **20** ಕ್ಕಿಂತಲೂ ಹೆಚ್ಚಿನ ಹುದ್ದೆಗಳು ಖಾಲಿ ಇರುವ ತಾಲ್ಲೂಕಿಗೆ ಆದ್ಯತೆಯ ಮೇಲೆ ವರ್ಗಾವಣೆಗೊಳಿಸುವುದು* |
| 5 | ಪುಟ 12<br>ಪ್ಯಾರ 6 | ("maximum period" means a continuous service of <u>five</u> years in a Zone in different cadres put together ) | <u>ತಿದ್ದುಪಡಿ</u><br>("maximum period" means a continuous service of <u>ten</u> years in a Zone in different cadres put together) |
| 6 | ಪುಟ ಸಂಖ್ಯೆ 14 | : ಘಟಕದ ಒಳಗೆ :<br>✓ ಒಂದೇ ಕ್ಲಸ್ಟರ್ [ಸಮೂಹ] ವ್ಯಾಪ್ತಿಯಲ್ಲಿ ಪರಸ್ಪರ ವರ್ಗಾವಣೆ ಪ್ರಕರಣ ಬಯಸಿ ಅರ್ಜಿ ಸಲ್ಲಿಸಿದಲ್ಲಿ ಅಂತಹ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ . | <u>ತಿದ್ದುಪಡಿ</u><br>[2. ಪರಸ್ಪರ ವರ್ಗಾವಣೆ ]<br>: ಘಟಕದ ಒಳಗೆ :<br>✓ ಒಂದೇ ಕ್ಲಸ್ಟರ್ [ಸಮೂಹ] ವ್ಯಾಪ್ತಿಯಲ್ಲಿ ಪರಸ್ಪರ ವರ್ಗಾವಣೆ ಪ್ರಕರಣ ಬಯಸಿ ಅರ್ಜಿ ಸಲ್ಲಿಸಿದಲ್ಲಿ ಅಂತಹ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. *ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳ ಒಳಗಡೆ ಎ ವಲಯದಿಂದ ಎ ವಲಯಕ್ಕೆ ಪರಸ್ಪರ ವರ್ಗಾವಣೆಗೆ ಅವಕಾಶವಿರುವುದಿಲ್ಲ.* |
| 7 | ಪುಟ ಸಂಖ್ಯೆ 14 | : ಘಟಕದ ಹೊರಗೆ :<br>✓ *ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳ ಒಳಗಡೆ ಎ ವಲಯದಿಂದ ಎ ವಲಯಕ್ಕೆ ಪರಸ್ಪರ ವರ್ಗಾವಣೆಗೆ ಅವಕಾಶವಿರುವುದಿಲ್ಲ.* | <u>ತಿದ್ದುಪಡಿ</u><br>[2. ಪರಸ್ಪರ ವರ್ಗಾವಣೆ ]<br>: ಘಟಕದ ಹೊರಗೆ :<br>✓ *ಪರಸ್ಪರ ವರ್ಗಾವಣೆ ಬಯಸುವ ಶಿಕ್ಷಕರು ವರ್ಗಾವಣೆಗೆ ಅರ್ಜಿ ಸಲ್ಲಿಸಲು ನಿಗದಿ ಪಡಿಸಿರುವ ಕೊನೆ ದಿನಾಂಕಕ್ಕೆ ನಿವೃತ್ತಿ ಹೊಂದಲು ಕನಿಷ್ಠ (ಮೂರು) **03** ವರ್ಷಕ್ಕಿಂತ ಹೆಚ್ಚಿನ ಸೇವೆ ಹೊಂದಿರಬೇಕು ಹಾಗೂ **3-** ವರ್ಷಕ್ಕಿಂತ ಕಡಿಮೆ ಅವಧಿ ಇರುವ ಶಿಕ್ಷಕರು ಪರಸ್ಪರ ವರ್ಗಾವಣೆಗೆ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ.* |

| | | | |
|---|---|---|---|
| | | | <u>**ಕೈ ಬಿಡಲಾಗಿದೆ**</u> : ~~[ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳ ಒಳಗಡೆ ಎ ವಲಯದಿಂದ ಎ ವಲಯಕ್ಕೆ ಪರಸ್ಪರ ವರ್ಗಾವಣೆಗೆ ಅವಕಾಶವಿರುವುದಿಲ್ಲ]~~ |
| 8 | ಪುಟ ಸಂಖ್ಯೆ 15 | [3. ಕೋರಿಕೆ ವರ್ಗಾವಣೆ]<br><u>ಘಟಕದ ಒಳಗೆ ಮತ್ತು ಹೊರಗೆ</u> :<br>✓ ಒಂದು ಜ್ಯೇಷ್ಠತಾ ಘಟಕದಿಂದ ಮತ್ತೊಂದು ಜ್ಯೇಷ್ಠತಾ ಘಟಕಕ್ಕೆ ವರ್ಗಾವಣೆ ಬಯಸಿರುವ ಶಿಕ್ಷಕರು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೇ ದಿನಾಂಕದಂದು ಇರುವಂತೆ ನಿಗದಿಪಡಿಸಿದ ಕನಿಷ್ಠ ಸೇವಾವಧಿಗಿಂತ ಕಡಿಮೆ ಇಲ್ಲದ ಸೇವೆಯನ್ನು ಪೂರ್ಣಗೊಳಿಸಿರಬೇಕು.<br>✓ ಪತಿ ಮತ್ತು ಪತ್ನಿ ಇಬ್ಬರೂ ಸರ್ಕಾರಿ ನೌಕರರಾಗಿದ್ದರೆ ಅಥವಾ ಕೇಂದ್ರ / ರಾಜ್ಯ ಸರ್ಕಾರಿ ನೌಕರರಾಗಿದ್ದರೆ ಅಥವಾ ಸಾರ್ವಜನಿಕ ವಲಯದ ಉದ್ದಿಮೆಯ ಖಾಯಂ ನೌಕರರಾಗಿದ್ದರೆ ಅಥವಾ ಸರ್ಕಾರಿ ಪ್ರಾಯೋಜಕತ್ವದ ಸೊಸೈಟಿಯಲ್ಲಿನ ಖಾಯಂ ನೌಕರರಾಗಿದ್ದಲ್ಲಿ ಅಥವಾ ರಾಷ್ಟ್ರೀಕೃತ ಬ್ಯಾಂಕಿನ ಖಾಯಂ ಉದ್ಯೋಗಿಯಾಗಿದ್ದರೆ ಕನಿಷ್ಠ ಸೇವಾವಧಿ ನಿಯಮ ಅನ್ವಯವಾಗುವುದಿಲ್ಲ. | <u>ತಿದ್ದುಪಡಿ</u><br>[3. ಕೋರಿಕೆ ವರ್ಗಾವಣೆ]<br><u>ಘಟಕದ ಒಳಗೆ ಮತ್ತು ಹೊರಗೆ</u> :<br>✓ ಘಟಕದ ಒಳಗಿನ ಅಥವಾ ಒಂದು ಜ್ಯೇಷ್ಠತಾ ಘಟಕದಿಂದ ಮತ್ತೊಂದು ಜ್ಯೇಷ್ಠತಾ ಘಟಕಕ್ಕೆ ವರ್ಗಾವಣೆ ಬಯಸಿರುವ ಶಿಕ್ಷಕರು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೇ ದಿನಾಂಕದಂದು ಇರುವಂತೆ ನಿಗದಿಪಡಿಸಿದ ಕನಿಷ್ಠ ಸೇವಾವಧಿಗಿಂತ ಕಡಿಮೆ ಇಲ್ಲದ ಸೇವೆಯನ್ನು ಪೂರ್ಣಗೊಳಿಸಿರಬೇಕು.<br>✓ ಘಟಕದ ಹೊರಗಿನ ವರ್ಗಾವಣೆಗಳಿಗೆ ಮಾತ್ರ ಅನ್ವಯವಾಗುವಂತೆ , ಪತಿ ಮತ್ತು ಪತ್ನಿ ಇಬ್ಬರೂ ಸರ್ಕಾರಿ ನೌಕರರಾಗಿದ್ದರೆ ಅಥವಾ ಕೇಂದ್ರ / ರಾಜ್ಯ ಸರ್ಕಾರಿ ನೌಕರರಾಗಿದ್ದರೆ ಅಥವಾ ಸಾರ್ವಜನಿಕ ವಲಯದ ಉದ್ದಿಮೆಯ ಖಾಯಂ ನೌಕರರಾಗಿದ್ದರೆ ಅಥವಾ ಸರ್ಕಾರಿ ಪ್ರಾಯೋಜಕತ್ವದ ಸೊಸೈಟಿಯಲ್ಲಿನ ಖಾಯಂ ನೌಕರರಾಗಿದ್ದಲ್ಲಿ ಅಥವಾ ರಾಷ್ಟ್ರೀಕೃತ ಬ್ಯಾಂಕಿನ ಖಾಯಂ ಉದ್ಯೋಗಿಯಾಗಿದ್ದರೆ ಕನಿಷ್ಠ ಸೇವಾವಧಿ ನಿಯಮ ಅನ್ವಯವಾಗುವುದಿಲ್ಲ. |
| 9 | ಪುಟ ಸಂಖ್ಯೆ 16 | • ರಾಜ್ಯ ಸರ್ಕಾರದ ವ್ಯಾಪ್ತಿಯಲ್ಲಿ ಬರುವ ಕೆಪಿಟಿಸಿಎಲ್, ಜಲಮಂಡಳಿ, ಮಹಾನಗರ ಪಾಲಿಕೆ, ಇಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರನ್ನೂ ಸಹಾ ಸರ್ಕಾರಿ ನೌಕರರೆಂದು ಪರಿಗಣಿಸಲಾಗುವುದು. ಈ ಕುರಿತಂತೆ ಅಗತ್ಯ ದೃಢೀಕರಣ ಮತ್ತು ದಾಖಲೆಗಳನ್ನು ಸಲ್ಲಿಸತಕ್ಕದ್ದು ಮತ್ತು ಖಾಯಂ ನೌಕರರು ಎಂಬ ಬಗ್ಗೆ ಸ್ಪಷ್ಟ ದಾಖಲೆ ಮತ್ತು ದೃಢೀಕರಣ | <u>ತಿದ್ದುಪಡಿ</u><br>• ರಾಜ್ಯ ಸರ್ಕಾರದ ವ್ಯಾಪ್ತಿಯಲ್ಲಿ ಬರುವ ಕೆಪಿಟಿಸಿಎಲ್, ಜಲಮಂಡಳಿ, ಮಹಾನಗರ ಪಾಲಿಕೆ, ಮುಂತಾದ ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರನ್ನೂ ಸಹಾ ಸರ್ಕಾರಿ ನೌಕರರೆಂದು ಪರಿಗಣಿಸಲಾಗುವುದು. ಈ ಕುರಿತಂತೆ ಅಗತ್ಯ ದೃಢೀಕರಣ ಮತ್ತು ದಾಖಲೆಗಳನ್ನು ಸಲ್ಲಿಸತಕ್ಕದ್ದು ಮತ್ತು ಖಾಯಂ ನೌಕರರು ಎಂಬ ಬಗ್ಗೆ ಸ್ಪಷ್ಟ ದಾಖಲೆ ಮತ್ತು ದೃಢೀಕರಣ ಸಲ್ಲಿಸತಕ್ಕದ್ದು.<br>• ಸಾರ್ವಜನಿಕ ವಲಯದ ಉದ್ದಿಮೆಗಳು , |

| | | | |
|---|---|---|---|
| | | ಸಲ್ಲಿಸತಕ್ಕದ್ದು.<br>• ಕೇಂದ್ರ ಸರ್ಕಾರದ ವ್ಯಾಪ್ತಿಯಲ್ಲಿರುವ ರೈಲ್ವೇ ಇಲಾಖೆ, ದೂರದರ್ಶನ, ಆಕಾಶವಾಣಿ, ಅಂಚೆ ಇಲಾಖೆ, ರಕ್ಷಣಾ ಸಚಿವಾಲಯದ ವ್ಯಾಪ್ತಿಯಲ್ಲಿ ಬರುವ ಇಸ್ರೋ, ಹೆಚ್.ಎ.ಎಲ್, ಎನ್.ಎ.ಎಲ್, ಬಿ.ಹೆಚ್.ಇ.ಎಲ್, ಬಿ.ಇ.ಎಲ್, ರಾಜ್ಯ ಮತ್ತು ಕೇಂದ್ರ ಸರ್ಕಾರದ ಇಲಾಖೆಗಳು ಎಂಬುದಾಗಿ ಅಧಿಕೃತರಿಂದ ಪಡೆದ ಪ್ರಮಾಣ ಪತ್ರಗಳನ್ನು ಸಲ್ಲಿಸುವ ಪ್ರಕರಣಗಳು. | ಕೇಂದ್ರ ಸರ್ಕಾರದ ವ್ಯಾಪ್ತಿಯಲ್ಲಿರುವ ರೈಲ್ವೇ ಇಲಾಖೆ, ದೂರದರ್ಶನ, ಆಕಾಶವಾಣಿ, ಅಂಚೆ ಇಲಾಖೆ, ರಕ್ಷಣಾ ಸಚಿವಾಲಯದ ವ್ಯಾಪ್ತಿಯಲ್ಲಿ ಬರುವ ಇಸ್ರೋ, ಹೆಚ್.ಎ.ಎಲ್, ಎನ್.ಎ.ಎಲ್, ಬಿ.ಹೆಚ್.ಇ.ಎಲ್, ಬಿ.ಇ.ಎಲ್, *ಮುಂತಾದ ಹಾಗು ರಾಷ್ಟ್ರೀಕೃತ ಬ್ಯಾಂಕ್ ಗಳ ಖಾಯಂ ನೌಕರರಾಗಿದ್ದಲ್ಲಿ ಸರ್ಕಾರದ ಇಲಾಖೆಗಳು/ಸಾರ್ವಜನಿಕ ವಲಯದ ಉದ್ದಿಮೆಗಳು/ರಾಷ್ಟ್ರೀಕೃತ ಬ್ಯಾಂಕ್ ಗಳು* ಎಂಬುದಾಗಿ ಅಧಿಕೃತರಿಂದ ಪಡೆದ ಪ್ರಮಾಣ ಪತ್ರಗಳನ್ನು ಸಲ್ಲಿಸುವ ಪ್ರಕರಣಗಳು |
| 10 | ಪುಟ ಸಂಖ್ಯೆ 17 | (4) ಇತರೆ ವಿವಾಹಿತ ಪ್ರಕರಣಗಳು | **<u>ತಿದ್ದುಪಡಿ</u>**<br>[ತೆಗೆದುಹಾಕಲಾಗಿದೆ]<br>~~(4) ಇತರೆ ವಿವಾಹಿತ ಪ್ರಕರಣಗಳು.~~ |
| ~~15~~ 11 | ಪುಟ ಸಂಖ್ಯೆ 17 | ಬಿ) ಪತಿ ಅಥವಾ ಪತ್ನಿ ಇಬ್ಬರಲ್ಲಿ ಒಬ್ಬರು ನೌಕರರಾಗಿರದ ಪ್ರಕರಣಗಳು<br>ಸಿ) ಇತರೆ ಪ್ರಕರಣಗಳು | **<u>ತಿದ್ದುಪಡಿ</u>**<br>[ತೆಗೆದುಹಾಕಲಾಗಿದೆ]<br>~~ಬಿ) ಪತಿ ಅಥವಾ ಪತ್ನಿ ಇಬ್ಬರಲ್ಲಿ ಒಬ್ಬರು ನೌಕರರಾಗಿರದ ಪ್ರಕರಣಗಳು~~<br>~~ಸಿ) ಇತರೆ ಪ್ರಕರಣಗಳು~~ |
| 12 | 18 | ✓ ಪತಿ ಮತ್ತು ಪತ್ನಿ, ಪತಿ ಅಥವಾ ಪತ್ನಿ, ನಿಗಮ ಮಂಡಳಿ | **<u>ತಿದ್ದುಪಡಿ</u>**<br>*ಪತಿ ಮತ್ತು ಪತ್ನಿ ಇಬ್ಬರೂ ಸರ್ಕಾರಿ ನೌಕರರಾಗಿರುವ ಪ್ರಕರಣಗಳು ಅಂದರೆ ಶಿಕ್ಷಕರ ಪತಿ/ಪತ್ನಿ ಸರ್ಕಾರಿ ಅಥವಾ ಸಾರ್ವಜನಿಕ ಉದ್ದಿಮೆಗಳು ಅಥವಾ ಸರ್ಕಾರದಿಂದ ಸ್ಥಾಪಿತವಾದ ಸೊಸೈಟಿಗಳ ಅಥವಾ ರಾಷ್ಟ್ರೀಕೃತ ಬ್ಯಾಂಕ್‌ಗಳ ಖಾಯಂ ನೌಕರರಾಗಿರುವ ಪ್ರಕರಣಗಳು*<br><br>[ತೆಗೆದುಹಾಕಲಾಗಿದೆ]<br>~~ಪತಿ ಅಥವಾ ಪತ್ನಿ, ನಿಗಮ ಮಂಡಳಿ~~ |

ನಿರ್ದೇಶಕರು
ಪ್ರಾಥಮಿಕ ಶಿಕ್ಷಣ

ಇವರಿಗೆ,

1) ಸಹ ನಿರ್ದೇಶಕರು, ಬೆಂಗಳೂರು/ಮೈಸೂರು/ಅಪರ ಆಯುಕ್ತರ ಕಛೇರಿ ಕಲ್ಬುರ್ಗಿ/ಧಾರವಾಡ
2) ಸಾರ್ವಜನಿಕ ಶಿಕ್ಷಣ ಇಲಾಖೆಯ ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ) ರವರಿಗೆ ಮುಂದಿನ ಕ್ರಮಕ್ಕಾಗಿ
3) ಕ್ಷೇತ್ರ ಶಿಕ್ಷಣಾಧಿಕಾರಿಯವರಿಗೆ (ಉಪನಿರ್ದೇಶಕರ ಮುಖಾಂತರ)

ಪ್ರತಿಯನ್ನು:-

1. ಸರ್ಕಾರದ ಕಾರ್ಯದರ್ಶಿಗಳು (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ) ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು-1 ಇವರಿಗೆ ವಂದನಾ ಪೂರ್ವಕವಾಗಿ ಸಲ್ಲಿಸಿದೆ.

2. ಆಪ್ತ ಕಾರ್ಯದರ್ಶಿಯವರು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
3. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ/ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ರಾಜ್ಯ ಯೋಜನಾ ನಿರ್ದೇಶಕರ ಕಛೇರಿ ಬೆಂಗಳೂರು.
4. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳವರಿಗೆ ಮಾಹಿತಿಗಾಗಿ ಕಳುಹಿಸಿದೆ.
5. ಸಹ ನಿರ್ದೇಶಕರು (ಆಡಳಿತ) ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು ಇವರಿಗೆ ಮಾಹಿತಿಗಾಗಿ
6. ಆಪ್ತ ಕಾರ್ಯದರ್ಶಿಯವರು, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು ಇವರಿಗೆ ಮಾಹಿತಿಗಾಗಿ
7. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲಬರ್ಗಾ/ಧಾರವಾಡ
8. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರುಗಳಿಗೆ
9. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಸಹನಿರ್ದೇಶಕರು ಹಾಗೂ ಪದನಿಮಿತ್ತ ವಿಭಾಗೀಯ ಕಾರ್ಯದರ್ಶಿಗಳು
10. ಸಹ ನಿರ್ದೇಶಕರು, ಮಧ್ಯಾಹ್ನ ಉಪಹಾರ ಯೋಜನೆ, ಕೆ.ಜಿ.ರಸ್ತೆ, ಬೆಂಗಳೂರು.
11. ಮುಖ್ಯಸ್ಥರು, ಇ-ಗೌರ್ನೆನ್ಸ್, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು-ಪ್ರಸಕ್ತ ವರ್ಗಾವಣೆಗಳಿಗೆ ಈಗಾಗಲೇ ಸಭೆಯಲ್ಲಿ ಸೂಚಿಸಿರುವಂತೆ "ತಂತ್ರಾಂಶವನ್ನು" ಸಜ್ಜುಗೊಳಿಸಿ ಅಗತ್ಯ ತಾಂತ್ರಿಕ ಸಹಕಾರವನ್ನು ಒದಗಿಸಲು ಸಂಬಂಧಿತ ತಂಡವನ್ನು ನಿಯೋಜಿಸಲು ಮತ್ತು ವೇಳಾಪಟ್ಟಿಯಂತೆ ಅಗತ್ಯ ಕ್ರಮ ಕೈಗೊಳ್ಳಲು ಕೋರಿದೆ.
12. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಉಪನಿರ್ದೇಶಕರು (ಅಭಿವೃದ್ಧಿ), ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್)
13. ರಾಜ್ಯದ ಎಲ್ಲಾ ತಾಲ್ಲೂಕ್ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳವರಿಗೆ
14. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ರವರಿಗೆ ಅಗತ್ಯ ಕ್ರಮಕ್ಕಾಗಿ
15. ಇಲಾಖಾ ವೆಬ್-ಸೈಟ್‌ನಲ್ಲಿ ರಾಜ್ಯದ ಎಲ್ಲ ಶಿಕ್ಷಕರ ಮತ್ತು ಇತರೆ ಸಾರ್ವಜನಿಕರ ಮಾಹಿತಿಗೆ ಪ್ರಕಟಣೆಗೆ
16. ಕಛೇರಿ ಪ್ರತಿ.